## 2. ವರದಿಯನ್ನೊಪ್ಪಿಸುವುದು

ಶ್ರೀ ಮನೋಹರ ಹೆಚ್. ತಹಸೀಲ್ದಾರ್(ಹಾನಗಲ್) : ಮಾನ್ಯ ಅಧ್ಯಕ್ಷರೆ, ವಿಧಾನಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಯ ಅಧ್ಯಕ್ಷನಾದ ನಾನು ವಿಧಾನಸಭೆಯ ಸದಸ್ಯರುಗಳ ಖಾಸಗಿ ವಿಧೇಯಕಗಳ ಹಾಗೂ ನಿರ್ಣಯಗಳ ಸಮಿತಿಯ ಐದನೇ ವರದಿಯನ್ನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು : ವರದಿಯನ್ನೊಪ್ಪಿಸಲಾಯಿತು.

## 3. ಸಭೆಯ ಮುಂದಿಡಲಾದ ಕಾಗದ ಪತ್ರಗಳು

I. ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) (ಶ್ರೀ ಎಸ್.ಎಂ. ಕೃಷ್ಣ, ಮುಖ್ಯಮಂತ್ರಿ ಅವರ ಪರವಾಗಿ) : ಮಾನ್ಯ ಅಧ್ಯಕ್ಷರೆ,

**1978ರ ಕರ್ನಾಟಕ ನಾಗರೀಕ ಸೇವಾ ಅಧಿನಿಯಮ 8(3)ರ ಪ್ರಕರಣದ ಮೇರೆಗೆ:**

1. ಕರ್ನಾಟಕ ಶಿಕ್ಷಣ ಇಲಾಖೆ ಸೇವೆಗಳು (ಸಾರ್ವಜನಿಕ ಶಿಕ್ಷಣ ಇಲಾಖೆ) (ನೇಮಕಾತಿ) ನಿಯಮಗಳು, 1999ನ್ನು ತಿದ್ದುಪಡಿ ಮಾಡಿ ದಿನಾಂಕ 22-01-2000ದಂದು ಹೊರಡಿಸಲಾದ ಸಿಆಸುಇ: 22: ಸೇನಿಇ: 99ನೇ ಸಂಖ್ಯೆಯ ಅಧಿಸೂಚನೆ;

2. ಕರ್ನಾಟಕ ಸಾಮಾನ್ಯ ಸೇವೆ (ನೊಂದಣಿ ಮತ್ತು ಮುದ್ರಾಂಕ) (ನೇಮಕಾತಿ) ನಿಯಮಗಳು 2000ಕ್ಕೆ ತಿದ್ದುಪಡಿ ಮಾಡಿ ದಿನಾಂಕ 24-11-2000ದಂದು ಹೊರಡಿಸಲಾದ ಸಿಆಸುಇ: 2: ಸೇನಿಇ: 2000ನೇ ಸಂಖ್ಯೆಯ ಅಧಿಸೂಚನೆ;

3. ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ನಿಯಮ 9ಕ್ಕೆ ತಿದ್ದುಪಡಿ ಮಾಡಿ ದಿನಾಂಕ 23-11-2000ದಂದು ಹೊರಡಿಸಲಾದ ಸಿಆಸುಇ: 23: ಸೆನೆನಿ: 99ನೇ ಸಂಖ್ಯೆಯ ಅಧಿಸೂಚನೆ;

4. ಕರ್ನಾಟಕ ಲೋಕೋಪಯೋಗಿ ಇಂಜಿನಿಯರಿಂಗ್ ಇಲಾಖೆ ಸೇವೆ (ನೇಮಕಾತಿ) (ತಿದ್ದುಪಡಿ) ನಿಯಮಗಳು 2000ಕ್ಕೆ ತಿದ್ದುಪಡಿ ಮಾಡಿ ದಿನಾಂಕ 24-01-2000ದಂದು ಹೊರಡಿಸಲಾದ ಸಿಆಸುಇ: 24: ಸೇನಿಡಿ: 99ನೇ ಸಂಖ್ಯೆಯ ಅಧಿಸೂಚನೆ;

5. ಕರ್ನಾಟಕ ಸಾಮಾನ್ಯ ಸೇವೆಗಳು (ಪದವಿ ಪೂರ್ವ ಶಿಕ್ಷಣ) (ನೇಮಕಾತಿ) (ತಿದ್ದುಪಡಿ) ನಿಯಮಗಳು 1996ಕ್ಕೆ ತಿದ್ದುಪಡಿ ಮಾಡಿ ದಿನಾಂಕ 26-12-2000ದಂದು ಹೊರಡಿಸಲಾದ ಸಿಆಸುಇ: 9: ಸೇನಿಇ: 99ನೇ ಸಂಖ್ಯೆಯ ಅಧಿಸೂಚನೆ;

6. ಕರ್ನಾಟಕ ಶಿಕ್ಷಣ ಇಲಾಖಾ ಸೇವೆಗಳು (ಕಾಲೇಜು ಶಿಕ್ಷಣ ಇಲಾಖೆ) (ಹುಣಸೂರು ಪುರಸಭೆ ಪ್ರಥಮ ದರ್ಜೆ ಕಾಲೇಜಿನ ಸಿಬ್ಬಂದಿ ಸೇವೆಯನ್ನು ಕರ್ನಾಟಕ ನಾಗರೀಕ ಸೇವೆಗಳಲ್ಲಿ ವಿಲೀನಗೊಳಿಸುವ) (ಮೊದಲನೆ ತಿದ್ದುಪಡಿ) ನಿಯಮಗಳು 2000ಕ್ಕೆ ತಿದ್ದುಪಡಿ ಮಾಡಿ ದಿನಾಂಕ 27-12-2000ದಂದು ಹೊರಡಿಸಲಾದ ಸಿಆಸುಇ: 73: ಸೇನಿಇ: 2000ನೇ ಸಂಖ್ಯೆಯ ಅಧಿಸೂಚನೆ;

7. ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2000 ಅನ್ನು ತಿದ್ದುಪಡಿ ಮಾಡಿ ದಿನಾಂಕ 30-11-2000ದಂದು ಹೊರಡಿಸಲಾದ ಸಿಆಸುಇ: 72: ಸೇನಿಡಿ: 2000(1)ನೇ ಸಂಖ್ಯೆಯ ಅಧಿಸೂಚನೆ;

8. ಕರ್ನಾಟಕ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು (ನೇಮಕಾತಿ) (ತಿದ್ದುಪಡಿ) ನಿಯಮಗಳು 2000 ಅನ್ನು ತಿದ್ದುಪಡಿ ಮಾಡಿ ದಿನಾಂಕ 30-11-2000ದಂದು ಹೊರಡಿಸಲಾದ ಸಿಆಸುಇ: 72: ಸೇನಿಡಿ: 2000(2)ನೇ ಸಂಖ್ಯೆಯ ಅಧಿಸೂಚನೆ;

9. ಕರ್ನಾಟಕ ಸರ್ಕಾರ ಸಚಿವಾಲಯ ಸೇವೆಗಳು (ನೇಮಕಾತಿ) ನಿಯಮಗಳು, 1992ಕ್ಕೆ ತಿದ್ದುಪಡಿ ಮಾಡಿ ದಿನಾಂಕ 18-01-2000ದಂದು ಹೊರಡಿಸಲಾದ ಸಿಆಸುಇ: 40: ಸೇನಿಡಿ: 97ನೇ ಸಂಖ್ಯೆಯ ಅಧಿಸೂಚನೆ;

10. ಕರ್ನಾಟಕ ನಾಗರೀಕ ಸೇವೆಗಳು (ಭೂ ಮಾಪನ ಮತ್ತು ಕಂದಾಯ ವ್ಯವಸ್ಥೆ ಇಲಾಖೆಯ ತಾತ್ಕಾಲಿಕ ನಕಲುದಾರರುಗಳ ಸೇವೆಯನ್ನು ವಿಲೀನಗೊಳಿಸುವ (ವಿಶೇಷ) ನಿಯಮಗಳು 1999ಕ್ಕೆ ತಿದ್ದುಪಡಿ ಮಾಡಿ ದಿನಾಂಕ 07-11-2000ದಂದು ಹೊರಡಿಸಲಾದ ಸಿಆಸುಇ: 10: ಸೇನಿಇ: 99ನೇ ಸಂಖ್ಯೆಯ ಅಧಿಸೂಚನೆ;

**ಭಾರತ ಸಂವಿಧಾನದ 213(2)(ಎ) ಅನುಚ್ಛೇದದ ಮೇರೆಗೆ;**

10.ಎ. 1979ರ ಕರ್ನಾಟಕ ವಿಲಾಸಗಳ ಮೇಲಿನ ತೆರಿಗೆ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ದಿನಾಂಕ 23-01-2001ರಂದು ಹೊರಡಿಸಲಾದ ಸಂವ್ಯಶಾಇ: 65: ಶಾಸನ: 2000ದ ಅಧ್ಯಾದೇಶ ಸಂಖ್ಯೆ: 3;

**1957ರ ಕರ್ನಾಟಕ ಮಾರಾಟ ತೆರಿಗೆ ಕಾಯ್ದೆಯ 39ನೇ ಪ್ರಕರಣದ ಮೇರೆಗೆ;**

11. ತಯಾರಿಸಲಾದ ಬೆರಕೆ ಕಾಂಕ್ರೀಟಿನ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಯಲ್ಲಿ ತಕ್ಷಣದಿಂದ ಜಾರಿಗೆ ಬರುವಂತೆ ಶೇಕಡಾವಾರು 10ರಷ್ಟು ಕಡಿಮೆಗೊಳಿಸುವ ಸಲುವಾಗಿ ದಿನಾಂಕ 15-11-2000ದಂದು ಹೊರಡಿಸಲಾದ ಎಫ್ ಡಿ: 154: ಸಿಎನ್ ಎಲ್: 2000ನೇ ಸಂಖ್ಯೆಯ ಅಧಿಸೂಚನೆ;

12. ಭಾರತ ಸರ್ಕಾರದ ಮಾಹಿತಿ ಮತ್ತು ಆಕಾಶವಾಣಿ ಪ್ರಸರಣಾ ಸಚಿವಾಲಯದ ಪ್ರಕಟಣಾ ವಿಭಾಗ ತಯಾರಿಸಿರುವ ಕಾಂಪ್ಯಾಕ್ಟ್ ಡಿಸ್ಕ್‌ನ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 13-12-2000ದಂದು ಹೊರಡಿಸಲಾದ ಎಫ್ ಡಿ: 247: ಸಿಎನ್ ಎಲ್: 99ನೇ ಸಂಖ್ಯೆಯ ಅಧಿಸೂಚನೆ;

13. ಶೈಕ್ಷಣಿಕ ಸಂಪನ್ಮೂಲ ಸಾಮಗ್ರಿಗಳ ಉದ್ದೇಶಕ್ಕಾಗಿ ಆಟದ ಸಾಮಾನುಗಳು ಮತ್ತು ಬೋಧನಾ ನೆರವು ಸೇವೆಯಲ್ಲಿನ ವಸ್ತುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 07-12-2000ದಂದು ಹೊರಡಿಸಲಾದ ಎಫ್ ಡಿ: 226: ಸಿಎನ್ ಎಲ್: 2000ನೇ ಸಂಖ್ಯೆಯ ಅಧಿಸೂಚನೆ;

14. ಬೆಂಗಳೂರು ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಿಡದಿಯಲ್ಲಿರುವ ಮೆ: ಹಿಂದೂಸ್ತಾನ್ ಕೋಕಾಕೋಲಾ ಬಿವರೇಜಸ್ ಪ್ರೈವೇಟ್ ಲಿಮಿಟೆಡ್‌ನವರು ತಯಾರಿಸಿರುವ ಸರಕುಗಳ ಮಾರಾಟದ ಮೇಲೆ ಪಾವತಿಸಬೇಕಾದ ತೆರಿಗೆಗೆ ವಿನಾಯಿತಿ ನೀಡಿ ದಿನಾಂಕ 19-04-2000ದಂದು ಹೊರಡಿಸಲಾದ ಎಫ್ ಡಿ: 119: ಸಿಎನ್ ಎಲ್: 98(ಪಿ)(1)ನೇ ಸಂಖ್ಯೆಯ ಅಧಿಸೂಚನೆ;

15. ಬೆಂಗಳೂರು ಜಿಲ್ಲೆಯ ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಿಡದಿಯಲ್ಲಿರುವ ಮೆ: ಹಿಂದೂಸ್ತಾನ್ ಕೋಕಾಕೋಲಾ ಬಿವರೇಜಸ್ ಪ್ರೈವೇಟ್ ಲಿಮಿಟೆಡ್‌ನವರು ತಯಾರಿಸಿರುವ ಸರಕುಗಳನ್ನು ಅಂತರರಾಜ್ಯ ವ್ಯಾಪಾರ ಅಥವಾ ವಹಿವಾಟಿನ ಮೇಲೆ ಪಾವತಿಸಬೇಕಾದ ತೆರಿಗೆಗೆ 8 ವರ್ಷಗಳ ಅವಧಿಗೆ ವಿನಾಯಿತಿ ನೀಡಿ ದಿನಾಂಕ 19-04-2000ದಂದು ಹೊರಡಿಸಲಾದ ಎಫ್ ಡಿ: 119: ಸಿಎನ್ ಎಲ್: 99(ಪಿ)(2)ನೇ ಸಂಖ್ಯೆಯ ಅಧಿಸೂಚನೆ;

16. ಬೆಂಗಳೂರು ಜಿಲ್ಲೆಯ, ಬೆಂಗಳೂರು ದಕ್ಷಿಣ ತಾಲ್ಲೂಕಿನ ಬಿಡದಿಯಲ್ಲಿರುವ ಮೆ: ಹಿಂದೂಸ್ತಾನ್ ಕೋಕಕೋಲಾ ಬಿವರೇಜಸ್ ಪ್ರೈವೇಟ್ ಲಿಮಿಟೆಡ್‌ರವರಿಗೆ ಒಂದು ಕೋಟಿಗಿಂತ ಹೆಚ್ಚು ಬೆಲೆ ಬಾಳುವ ಯಂತ್ರ ಸಾಮಗ್ರಿ ಮತ್ತು ಸಾಧನ ಸಾಮಗ್ರಿಗಳ ಮಾರಾಟ ಮಾಡುವ ನೊಂದಣಿಯಾದ ವರ್ತಕರು ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಕೆಲವು ಷರತ್ತಿನ ಮೇಲೆ ವಿನಾಯಿತಿ ನೀಡಿ ದಿನಾಂಕ 19-04-2000ದಂದು ಹೊರಡಿಸಲಾದ ಎಫ್ ಡಿ: 119: ಸಿಎನ್ ಎಲ್: 99(ಪಿ)(3)ನೇ ಸಂಖ್ಯೆಯ ಅಧಿಸೂಚನೆ;

17. ಬೆಂಗಳೂರು ಜಿಲ್ಲೆಯ ಅನೇಕ ತಾಲ್ಲೂಕಿನ ಅತ್ತಿಬೆಲೆ ಕೈಗಾರಿಕಾ ಪ್ರದೇಶದಲ್ಲಿರುವ ಮೆ: ಅಪ್ಲಿಕಾಂಪ್ ಇಂಡಿಯಾ ಲಿಮಿಟೆಡ್‌ನವರು ತಯಾರಿಸಿ ಮಾರಾಟ ಮಾಡುವ ಸರಕುಗಳ ಮೇಲೆ ಪಾವತಿಸಬೇಕಾದ ತೆರಿಗೆಗೆ 10 ವರ್ಷಗಳ ಅವಧಿಗೆ ಕೆಲವು ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಟ್ಟು ವಿನಾಯಿತಿ ನೀಡಿ ದಿನಾಂಕ 20-07-2000ದಂದು ಹೊರಡಿಸಲಾದ ಎಫ್ ಡಿ: 296: ಸಿಎನ್ ಎಲ್: 99(1)ನೇ ಸಂಖ್ಯೆಯ ಅಧಿಸೂಚನೆ;

18. ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಕೈಗಾರಿಕಾ ಪ್ರದೇಶದಲ್ಲಿರುವ ಮೆ: ಅಪ್ಲಿಕಾಂಪ್ ಇಂಡಿಯಾ ಲಿಮಿಟೆಡ್‌ನವರು ತಯಾರಿಸಿರುವ ಸರಕುಗಳನ್ನು ಅಂತಹ ರಾಜ್ಯ ವ್ಯಾಪಾರ ಅಥವಾ ವಾಣಿಜ್ಯ ವಹಿವಾಟಿನ ಮೇಲೆ ಪಾವತಿಸಬೇಕಾದ ಕೇಂದ್ರ ಮಾರಾಟ ತೆರಿಗೆಗೆ 10 ವರ್ಷಗಳ ಅವಧಿಗೆ ವಿನಾಯಿತಿ ನೀಡಿ ದಿನಾಂಕ 20-07-2000ದಂದು ಹೊರಡಿಸಿರುವ ಎಫ್ ಡಿ: 296: ಸಿಎನ್ ಎಲ್: 99(1)ನೇ ಸಂಖ್ಯೆಯ ಅಧಿಸೂಚನೆಯಲ್ಲಿನ ನಿಬಂಧನೆಗಳು ಮತ್ತು ಷರತ್ತುಗಳಿಗೊಳಪಡಿಸಿ ದಿನಾಂಕ 20-07-2000ದಂದು ಹೊರಡಿಸಲಾದ ಎಫ್ ಡಿ: 296: ಸಿಎನ್ ಎಲ್: 99(2)ನೇ ಸಂಖ್ಯೆಯ ಅಧಿಸೂಚನೆ;

19. ಬೆಂಗಳೂರು ಜಿಲ್ಲೆಯ ಆನೇಕಲ್ ತಾಲ್ಲೂಕಿನ ಅತ್ತಿಬೆಲೆ ಕೈಗಾರಿಕಾ ಪ್ರದೇಶದಲ್ಲಿರುವ ಮೆ: ಅಪ್ಲಿಕಾಂಪ್ ಇಂಡಿಯಾ ಲಿಮಿಟೆಡ್‌ನವರು ಖರೀದಿಸುವ ಒಂದು ಕೋಟಿಗಿಂತಲೂ ಹೆಚ್ಚು ಬೆಲೆಯುಳ್ಳ ಯಂತ್ರ ಸಾಮಗ್ರಿ ಮತ್ತು ಸಾಧನ ಸಾಮಗ್ರಿಗಳ ಮಾರಾಟದ ಮೇಲೆ ರಾಜ್ಯದಲ್ಲಿನ ನೊಂದಾಯಿತ ವರ್ತಕರು ಪಾವತಿಸಬೇಕಾದ ತೆರಿಗೆಗೆ ತಕ್ಷಣದಿಂದ ಜಾರಿಗೆ ಬರುವಂತೆ ವಿನಾಯಿತಿ ನೀಡಿ ದಿನಾಂಕ 20-07-2000ದಂದು ಹೊರಡಿಸಲಾದ ಎಫ್ ಡಿ: 296: ಸಿಎನ್ ಎಲ್: 99(3)ನೇ ಸಂಖ್ಯೆಯ ಅಧಿಸೂಚನೆ;

20. 19-04-2000ನೇ ದಿನಾಂಕ ಎಫ್ ಡಿ: 119: ಸಿಎನ್ ಎಲ್: (ಪಿ)(1)ನೇ ಸಂಖ್ಯೆಯ ಅಧಿಸೂಚನೆಗೆ ತಿದ್ದುಪಡಿ ಮಾಡಿ ದಿನಾಂಕ 13-12-2000ದಂದು ಹೊರಡಿಸಲಾದ ಎಫ್ ಡಿ: 119: ಸಿಎನ್ ಎಲ್: 99(2)ನೇ ಸಂಖ್ಯೆಯ ಅಧಿಸೂಚನೆ;

21. ಆಹಾರ ಮತ್ತು ಪಾನೀಯಗಳ ಸರಕುಗಳ ಮಾರಾಟದ ಮೇಲೆ ವರ್ತಕರು ಪಾವತಿಸಬೇಕಾದ ತೆರಿಗೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕಡಿಮೆಗೊಳಿಸಿ ದಿನಾಂಕ 7-12-2000ದಂದು ಹೊರಡಿಸಲಾದ ಎಫ್ ಡಿ: 71: ಸಿಎನ್ ಎಲ್: 2000ನೇ ಸಂಖ್ಯೆಯ ಅಧಿಸೂಚನೆ;

**1965ರ ಕರ್ನಾಟಕ ಅಬಕಾರಿ ಕಾಯ್ದೆ 71(4)ರ ಪ್ರಕರಣದ ಮೇರೆಗೆ**

22. ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968ಕ್ಕೆ ತಿದ್ದುಪಡಿ ಮಾಡಿ ದಿನಾಂಕ 18-11-2000ದಂದು ಹೊರಡಿಸಲಾದ ಎಫ್ ಡಿ: 9: ಪಿಇಎನ್: 2000ನೇ ಸಂಖ್ಯೆಯ ಅಧಿಸೂಚನೆ;

23. ಕರ್ನಾಟಕ ಅಬಕಾರಿ (ಸಾರಾಯಿ ತಯಾರಿಕಾ ಮತ್ತು ಬಾಟ್ಲಿಂಗ್) ನಿಯಮಗಳು 1987ಕ್ಕೆ ತಿದ್ದುಪಡಿ ಮಾಡಿ ದಿನಾಂಕ 18-11-2000ದಂದು ಹೊರಡಿಸಲಾದ ಎಫ್ ಡಿ: 23: ಪಿಇಎನ್: 99(1)ನೇ ಸಂಖ್ಯೆಯ ಅಧಿಸೂಚನೆ;

24. ಕರ್ನಾಟಕ ಅಬಕಾರಿ (ಭಾರತೀಯ ಹಾಗೂ ವಿದೇಶಿ ಮದ್ಯ ಮಾರಾಟ) ನಿಯಮಗಳು 1968ಕ್ಕೆ ತಿದ್ದುಪಡಿ ಮಾಡಿ ದಿನಾಂಕ 18-11-2000ದಂದು ಹೊರಡಿಸಲಾದ ಎಫ್ ಡಿ: 23: ಪಿಇಎನ್: 99(2)ನೇ ಸಂಖ್ಯೆಯ ಅಧಿಸೂಚನೆ;

25. ಕರ್ನಾಟಕ ಅಬಕಾರಿ ಸನ್ನದು (ಸಾಮಾನ್ಯ ಷರತ್ತು) ನಿಯಮ 1967ರಲ್ಲಿ ನಿಯಮ 5 ಮತ್ತು 23ಕ್ಕೆ ತಿದ್ದುಪಡಿ ಮಾಡಿ ದಿನಾಂಕ 27-11-2000ದಂದು ಹೊರಡಿಸಲಾದ ಎಫ್ ಡಿ: 9: ಪಿಇಎನ್: 99ನೇ ಸಂಖ್ಯೆಯ ಅಧಿಸೂಚನೆ;

26. ಕರ್ನಾಟಕ ಅಬಕಾರಿ (ಡಿಸ್ಟಿಲರಿ ಮತ್ತು ವೇರ್‌ಹೌಸ್) ನಿಯಮಗಳು 1967ರ ನಿಯಮ 7ಕ್ಕೆ ತಿದ್ದುಪಡಿ ಮಾಡಿ ದಿನಾಂಕ 20-01-2001ರಂದು ಹೊರಡಿಸಲಾದ ಎಫ್ ಡಿ: 2: ಪಿಇಎನ್: 99ನೇ ಸಂಖ್ಯೆಯ ಅಧಿಸೂಚನೆ;

II. ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) : ಮಾನ್ಯ ಅಧ್ಯಕ್ಷರೆ,

**1964ರ ಕರ್ನಾಟಕ ಸಿನಿಮಾ (ನಿಯಂತ್ರಣ) ಕಾಯ್ದೆ 20ರ ಪ್ರಕರಣದ ಮೇರೆಗೆ**

1. ಬೆಳಗಾವಿ ಜಿಲ್ಲೆಯಲ್ಲಿ ಭಾರತೀಯ ಮಕ್ಕಳ ಚಲನಚಿತ್ರ ಸಂಸ್ಥೆಯು ಮಕ್ಕಳ ಚಲನಚಿತ್ರಗಳನ್ನು ಬೆಳಗಿನ ವಿಶೇಷ ಪ್ರದರ್ಶನಗಳಲ್ಲಿ ಪ್ರದರ್ಶಿಸಲು ಅನುಮತಿ ನೀಡುವ ಸಂಬಂಧದಲ್ಲಿ ದಿನಾಂಕ 21-11-2000ದಂದು ಹೊರಡಿಸಲಾದ ಒಸಾಇ:47:ಸಿಎನ್.ಎ:2000ನೇ ಸಂಖ್ಯೆಯ ಅಧಿಸೂಚನೆ;

2. ಕಾರವಾರ ಜಿಲ್ಲೆಯಲ್ಲಿ ಮಕ್ಕಳ ಚಿತ್ರೋತ್ಸವ 2001ರಲ್ಲಿ ಮಕ್ಕಳ ಚಲನಚಿತ್ರಗಳನ್ನು ಪ್ರದರ್ಶಿಸಲು ಕರ್ನಾಟಕ ಸಿನಿಮಾ ಕಾಯ್ದೆ ಪ್ರಕರಣ 41(ಎ)ಗೆ ವಿನಾಯಿತಿ ನೀಡಿ ದಿನಾಂಕ 01-01-2001ರಂದು ಹೊರಡಿಸಲಾದ ಒಸಾಇ:78:ಸಿಎನ್ಎ:2000ನೇ ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

(ಶ್ರೀ ಹೆಚ್.ಕೆ. ಪಾಟೀಲ್, ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ ಪರವಾಗಿ) ಮಾನ್ಯ ಅಧ್ಯಕ್ಷರೆ,

1. ಕಾಡಾ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಪ್ರಾಧಿಕಾರ ತುಂಗಭದ್ರಾ ಯೋಜನೆ, ಮುನಿರಾಬಾದ್ 1999-2000ನೇ ಸಾಲಿನ ವಾರ್ಷಿಕ ವರದಿ;

2. ಭದ್ರಾ ಕಾಡಾ ಯೋಜನೆ (ಶಿವಮೊಗ್ಗ) ಪ್ರಾಧಿಕಾರದ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

3. ಅಚ್ಚುಕಟ್ಟು ಅಭಿವೃದ್ಧಿ ಪ್ರಾಧಿಕಾರದ ಕಾವೇರಿ ಜಲಾನಯನ ಯೋಜನೆಗಳ (ಮೈಸೂರು) 1999-2000ನೇ ಸಾಲಿನ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು) :

(ಶ್ರೀ ಎಂ.ವೈ. ಘೋರ್ಪಡೆ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ,

1. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

2. ಧಾರವಾಡ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

3. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

4. ಉಡುಪಿ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

5. ಚಿಕ್ಕಮಗಳೂರು ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

6. ಉತ್ತರ ಕನ್ನಡ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

7. ತುಮಕೂರು ಜಿಲ್ಲಾ ಪಂಚಾಯತ್‌ನ 1998-1999ನೇ ಸಾಲಿನ ವಾರ್ಷಿಕ ಆಡಳಿತ ವರದಿ;

8. ದಾವಣಗೆರೆ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

9. ಮಂಡ್ಯ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

10. ಬೆಂಗಳೂರು (ನಗರ) ಜಿಲ್ಲಾ ಪಂಚಾಯತ್‌ನ 1998-1999ನೇ ಸಾಲಿನ ವಾರ್ಷಿಕ ಆಡಳಿತ ವರದಿ;

11. ಬೆಂಗಳೂರು (ಗ್ರಾಮಾಂತರ) ಜಿಲ್ಲಾ ಪಂಚಾಯತ್‌ನ 1998-1999ನೇ ಸಾಲಿನ ವಾರ್ಷಿಕ ಆಡಳಿತ ವರದಿ;

12. ಬಿಜಾಪುರ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

13. ಕೊಪ್ಪಳ ಜಿಲ್ಲಾ ಪಂಚಾಯತ್‌ನ 1999-2000ನೇ ಸಾಲಿನ ವಾರ್ಷಿಕ ಆಡಳಿತ ವರದಿ;

1993ರ ಕರ್ನಾಟಕ ಪಂಚಾಯತ್‌ರಾಜ್ ಅಧಿನಿಯಮ 262(3)ರ ಪ್ರಕರಣದ ಮೇರೆಗೆ

14. ಬಳ್ಳಾರಿ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಲೆಕ್ಕ ಮತ್ತು ಪರಿಶೋಧನಾ ವರದಿ;

15. ಮಂಡ್ಯ ಜಿಲ್ಲಾ ಪಂಚಾಯತ್‌ನ 1997-98ನೇ ಸಾಲಿನ ವಾರ್ಷಿಕ ಲೆಕ್ಕ ಮತ್ತು ಪರಿಶೋಧನಾ ವರದಿ;

16. ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್‌ನ 1998-99ನೇ ಸಾಲಿನ ವಾರ್ಷಿಕ ಲೆಕ್ಕ ಮತ್ತು ಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು)

(ಶ್ರೀ ಬಿ.ಬಿ. ಚಿಮ್ಮನಕಟ್ಟಿ, ನಗರಾಭಿವೃದ್ಧಿ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ,

**ಭಾರತ ಸಂವಿಧಾನದ 213(2)(ಎ) ಅನುಚ್ಛೇದದ ಮೇರೆಗೆ ;**

1. 1976ರ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ಸ್ ಅಧಿನಿಯಮಕ್ಕೆ ತಿದ್ದುಪಡಿ ಮಾಡಿ ದಿನಾಂಕ 09-01-2000ರಂದು ಹೊರಡಿಸಲಾದ ಸಂಖ್ಯಾಇ:43:ಶಾಸನ:2000ದ ಆಧ್ಯಾದೇಶ ಸಂಖ್ಯೆ:2;

**1987ರ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರದ ಅಧಿನಿಯಮ 48(5) ಹಾಗೂ 49ನೇ ಪ್ರಕರಣದ ಮೇರೆಗೆ**

2. ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ;

3. ಹುಬ್ಬಳ್ಳಿ-ಧಾರವಾಡ ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ಲೆಕ್ಕಪರಿಶೋಧನಾ ವರದಿ;

4. ಕಾರವಾರ ನಗರಾಭಿವೃದ್ಧಿ ಪ್ರಾಧಿಕಾರದ 1999-2000ನೇ ಸಾಲಿನ ಲೆಕ್ಕಪರಿಶೋಧನಾ ವರದಿ;

5. ಮಡಿಕೇರಿ ನಗರಾಭಿವೃದ್ಧಿ ಪ್ರಾಧಿಕಾರದ 1997-98 ಮತ್ತು 1998-99ನೇ ಸಾಲುಗಳ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಸಚಿವರು)

(ಶ್ರೀ ಕಾಗೋಡು ತಿಮ್ಮಪ್ಪ, ಸಮಾಜ ಕಲ್ಯಾಣ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ,

**1956ನೇ ಕಂಪನಿ ಕಾಯ್ದೆ 619(ಎ) ಪ್ರಕರಣದ ಮೇರೆಗೆ;**

ಕರ್ನಾಟಕ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 1999-2000ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹ್ಮದ್ (ಸಾರಿಗೆತ ಸಚಿವರು) ಅವರು : ಮಾನ್ಯ ಅಧ್ಯಕ್ಷರೆ,

**1957ರ ಕರ್ನಾಟಕ ಮೋಟಾರು ವಾಹನ ತೆರಿಗೆ ಕಾಯ್ದೆಯ 16(2)ರ ಪ್ರಕರಣದ ಮೇರೆಗೆ;**

1. ಬೆಂಗಳೂರು ಸೇಂಟ್ ಥಾಮಸ್ ಟೌನ್ ಅಂಚೆ, ಹೆಣ್ಣೂರು ರಸ್ತೆಯ 6ನೇ ಅಡ್ಡರಸ್ತೆಯಲ್ಲಿರುವ ಅಂಗವಿಕಲರ ಸಂಘಕ್ಕೆ ಸಂಬಂಧಪಟ್ಟ ವಾಹನ ಸಂಖ್ಯೆ: ಕೆಎ 03 ಪಿ 8096ಕ್ಕೆ ಪಾವತಿಸಬೇಕಾದ ಸಿಎಜೆ 1581ಕ್ಕೆ ತೆರಿಗೆ ಪಾವತಿಯಲ್ಲಿ ವಿನಾಯಿತಿ ನೀಡಿ ದಿನಾಂಕ 05-09-2000ದಂದು ಹೊರಡಿಸಲಾದ ಹೆಚ್ಟಿಡಿ: 115: ಟಿಎಂಎ: 2000ನೇ ಸಂಖ್ಯೆಯ ಅಧಿಸೂಚನೆ;

2. ಬೆಂಗಳೂರು ಹೆಣ್ಣೂರು ರಸ್ತೆಯಲ್ಲಿರುವ ಲಿಟ್ಲ ಸಿಸ್ಟರ್ಸ್ ಆಫ್ ದಿ ಪೂರ್ ಇವರು ಹೊಂದಿರುವ ಮಹೇಂದ್ರ ಮಾರ್ಷಲ್ ವಾಹನ ಸಂಖ್ಯೆ : ಡಿಎಕ್ಸ್ 68645ಕ್ಕೆ ತೆರಿಗೆ ಪಾವತಿಯಲ್ಲಿ ನೀಡಲಾಗಿದ್ದ ವಿನಾಯಿತಿಯನ್ನು ವಾಪಸ್ಸು ಪಡೆದು ವಾಹನ ಸಂಖ್ಯೆ ಕೆಎ-03-ಎಂ-2793ಕ್ಕೆ ತೆರಿಗೆ ವಿನಾಯಿತಿಯನ್ನು ಮಂಜೂರು ಮಾಡಿ ದಿನಾಂಕ 05-09-2000ದಂದು ಹೊರಡಿಸಲಾದ ಹೆಚ್ಟಿಡಿ: 298: ಟಿಎಂಎ: 2000ನೇ ಸಂಖ್ಯೆಯ ಅಧಿಸೂಚನೆ;

3. ರಮಣ ಮಹರ್ಷಿ ಸೆಂಟರ್ ಫಾರ್ ಲರ್ನಿಂಗ್, ಸಂಖ್ಯೆ: 40: 41, 2ನೇ ಅಡ್ಡರಸ್ತೆ, ಲೇವರ್ ಪ್ಯಾಲೇಸ್ ಅರ್ಚರ್ಡ್ಸ್, ಬೆಂಗಳೂರು ಇವರು ಹೊಂದಿದ್ದ ವಾಹನ ಸಂಖ್ಯೆ: ಟಿಎಂಯು 4401ಕ್ಕೆ ನೀಡಲಾಗಿದ್ದ ತೆರಿಗೆ ವಿನಾಯಿತಿಯನ್ನು ರದ್ದುಪಡಿಸಿ ಇವರು ಹೊಂದಿರುವ ವಾಹನ ನೊಂದಾಯಿತ ಸಂಖ್ಯೆ: ಕೆ.ಎ 04 ಜಡ್ 396 ಟೆಂಪೋ ಟ್ರಾವಲರ್‌ಗೆ ಮೋಟಾರು ವಾಹನ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ : 23-10-2000ದಂದು ಹೊರಡಿಸಲಾದ ಒಸಾಇ: 252: ಟಿಎಂಎ: 2000ನೇ ಸಂಖ್ಯೆಯ ಅಧಿಸೂಚನೆ;

4. ಲಿಟ್ಲ್ ಸಿಸ್ಟರ್ಸ್ ಆಫ್ ದಿ ಪೂರ್, ಶಾಂತಿ ಕಿರಣ್, ಸಂಖ್ಯೆ: 80 ರಾಜ್ಯ ಹೆದ್ದಾರಿ 17, ಪ್ರೇಮಸಗರ, ಮಂಗಳೂರು ಇವರು ಹೊಂದಿರುವ ವಾಹನ ನೊಂದಾಯಿತ ಸಂಖ್ಯೆ : ಕೆ.ಎ. 19 ಎನ್ 3570ಯು ಆಮ್ನಿ ಬಸ್‌ಗೆ ಕರ್ನಾಟಕ ಮೊಟಾರು ವಾಹನ ತೆರಿಗೆಯಿಂದ ವಿನಾಯಿತಿ ನೀಡಿ ದಿನಾಂಕ: 19-10-2000ದಂದು ಹೊರಡಿಸಲಾದ ಒಸಾಇ: 317: ಟಿಎಂಎ: 2000ನೇ ಸಂಖ್ಯೆಯ ಅಧಿಸೂಚನೆ;

5. ನೈಟಿಂಗೇಲ್ ವೈದ್ಯಕೀಯ ಟ್ರಸ್ಟ್, ಸಂಖ್ಯೆ: 337, 4ನೇ ಮುಖ್ಯ ರಸ್ತೆ, ಸದಾಶಿವನಗರ, ಬೆಂಗಳೂರು ಇವರು ಹೊಂದಿರುವ ವಾಹನದ ತಾತ್ಕಾಲಿಕ ನೊಂದಾಯಿತ ಸಂಖ್ಯೆ: ಕೆಎ 03 ಎಸ್‌ಟಿಆರ್ 2932 (ಮಹೇಂದ್ರ ಆಮ್ನಿ ಬಸ್)ಕ್ಕೆ ವಿನಾಯಿತಿ ನೀಡಿ ದಿನಾಂಕ: 29-3-2000ದಂದು ಹೊರಡಿಸಲಾದ ಹೆಚ್‌ಟಿಡಿ: 113: ಟಿಎಂಎ: 2000ನೇ ಸಂಖ್ಯೆಯ ಅಧಿಸೂಚನೆ;

6. ಶ್ರೀ ಸ್ವಾಮೀಜಿ, ಕುಂದಾಪುರ ವ್ಯಾಸರಾಜ ಮಠ, ಹನುಮಂತನಗರ, ಬೆಂಗಳೂರು. ಇವರು ಹೊಂದಿರುವ ವಾಹನ ಸಂಖ್ಯೆ: ಸಿಎಎನ 3794ಕ್ಕೆ ವಾಹನ ತೆರಿಗೆಯಿಂದ ವಿನಾಯಿತಿ ನೀಡಿ ವಾಹನ ಸಂಖ್ಯೆ: ಕೆಎ 05 ಪಿ 8777 (ಟೆಂಪೋ ಟ್ರಾವೆಲರ್)ಕ್ಕೆ ನೀಡಿರುವ ತೆರಿಗೆ ವಿನಾಯಿತಿಯನ್ನು ರದ್ದುಪಡಿಸಿ ದಿನಾಂಕ : 31-03-2000ದಂದು ಹೊರಡಿಸಲಾದ ಹೆಚ್‌ಟಿಡಿ: 73: ಟಿಎಂಎ: 2000ನೇ ಸಂಖ್ಯೆಯ ಅಧಿಸೂಚನೆಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು)

ಶ್ರೀ ಆರ್.ವಿ.ದೇಶಪಾಂಡೆ (ಬೃಹತ್ ಹಾಗೂ ಮಧ್ಯಮ ಕೈಗಾರಿಕಾ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ,

**1956ರ ಕಂಪನಿ ಕಾಯ್ದೆ 619 (ಎ) ಪ್ರಕರಣದ ಮೇರೆಗೆ;**

1. ಕರ್ನಾಟಕ ಸಾಬೂನು ಮತ್ತು ಮಾರ್ಜಕ ನಿಯಮಿತ 1999-2000ನೇ ಸಾಲಿನ ವಾರ್ಷಿಕ ವರದಿ;

2. ಕರ್ನಾಟಕ ರಾಜ್ಯ ಸಣ್ಣ ಕೈಗಾರಿಕೆಗಳ ಅಭಿವೃದ್ಧಿ ನಿಗಮ(ನಿ)ದ 1999-2000ನೇ ಸಾಲಿನ ವಾರ್ಷಿಕ ಲೆಕ್ಕಪತ್ರಗಳ ವರದಿ;

3. ಮೈಸೂರು ಕಾಗದ ಕಾರ್ಖಾನೆ ನಿಯಮಿತದ 1999-2000ನೇ ಸಾಲಿನ ವಾರ್ಷಿಕ ವರದಿ;

4. ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮ ನಿಯಮಿತದ 1999-2000ನೇ ಸಾಲಿನ ವಾರ್ಷಿಕ ವರದಿ;

5. ಕರ್ನಾಟಕ ಸ್ಟೇಟ್ ಎಲೆಕ್ಟ್ರಾನಿಕ್ಸ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ (ಕಿಯೋನಿಕ್ಸ್)ನ 1999-2000ನೇ ಸಾಲಿನ 23ನೇ ವಾರ್ಷಿಕ ವರದಿ;

6. ಕರ್ನಾಟಕ ರಾಜ್ಯ ತೆಂಗಿನ ನಾರಿನ ಅಭಿವೃದ್ಧಿ ನಿಗಮ ನಿಯಮಿತದ 1999-2000ನೇ ಸಾಲಿನ 15ನೇ ವಾರ್ಷಿಕ ವರದಿ ಹಾಗೂ ಲೆಕ್ಕಪರಿಶೋಧನಾ ವರದಿ;

7. ಕರ್ನಾಟಕ ರಾಜ್ಯ ವಿದ್ಯುತ್ ಮಗ್ಗಗಳ ಅಭಿವೃದ್ಧಿ ನಿಗಮ ನಿಯಮಿತದ 1999-2000ನೇ ಸಾಲಿನ ವಾರ್ಷಿಕ ವರದಿ;

8. ಮೈಸೂರು ಕಾಸ್ಮೆಟಿಕ್ಸ್ ಸಂಸ್ಥೆಯ 1999-2000ನೇ ಸಾಲಿನ ವಾರ್ಷಿಕ ವರದಿ;

9. ದಿ ಮೈಸೂರು ಲ್ಯಾಂಪ್ಸ್ ವರ್ಕ್ಸ್ ಲಿಮಿಟೆಡ್‌ನ 1999-2000ನೇ ಸಾಲಿನ ವಾರ್ಷಿಕ ವರದಿ;

10. ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ನಿಯಮಿತದ 1999-2000ನೇ ಸಾಲಿನ 34ನೇ ವಾರ್ಷಿಕ ವರದಿ;

11. ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತ 1999-2000ನೇ ಸಾಲಿನ 25ನೇ ವಾರ್ಷಿಕ ವರದಿ;

12. ಕರ್ನಾಟಕ ವಿದ್ಯುತ್ ಕಾರ್ಖಾನೆ ನಿಯಮಿತದ 1999-2000ನೇ ಸಾಲಿನ 24ನೇ ವಾರ್ಷಿಕ ವರದಿ;

13. ಮೈಸೂರು ಅಸಿಟೇಟ್ ಮತ್ತು ಕೆಮಿಕಲ್ಸ್ ಕಂಪನಿ ನಿಯಮಿತ 1999-2000ನೇ ಸಾಲಿನ 36ನೇ ವಾರ್ಷಿಕ ವರದಿ ಹಾಗೂ ಲೆಕ್ಕಪತ್ರ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಹೆಚ್.ಸಿ. ಶ್ರೀಕಂಠಯ್ಯ (ಕಂದಾಯ ಸಚಿವರು) ಅವರು : ಮಾನ್ಯ ಅಧ್ಯಕ್ಷರೆ

**1964ರ ಕರ್ನಾಟಕ ಭೂ ಕಂದಾಯ ಇಯ್ದೆ 1998ರ ಪ್ರಕರಣದ ಮೇರೆಗೆ**

ಕರ್ನಾಟಕ ಭೂ ಕಂದಾಯ ನಿಯಮಗಳು 1966ರ 107ನೇ ನಿಯಮಕ್ಕೆ ತಿದ್ದುಪಡಿ ಮಾಡಿ ದಿನಾಂಕ 09-06-2000ದಂದು ಹೊರಡಿಸಲಾದ ಆರ್ ಡಿ: 58: ಎಲ್‌ಜಿಬಿ: 99ನೇ ಸಂಖ್ಯೆಯ ಅಧಿಸೂಚನೆಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಸಿ.ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು)

(ಶ್ರೀ ಡಿ.ಬಿ. ಚಂದ್ರೇಗೌಡ, ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರ ಪರವಾಗಿ): ಮಾನ್ಯ ಅಧ್ಯಕ್ಷರೆ

**1987ರ ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರದ ಅಧಿನಿಯಮ 18(4)ರ ಪ್ರಕರಣದ ಮೇರೆಗೆ;**

1. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ 1997-98 ಮತ್ತು 1998-99ನೇ ಸಾಲಿನ ವಾರ್ಷಿಕ ಲೆಕ್ಕಪರಿಶೋಧನಾ ವರದಿ;

2. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ 1999-2000ನೇ ಸಾಲಿನ ವಾರ್ಷಿಕ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಡಿ.ಬಿ. ಜಯಚಂದ್ರ (ಕೃಷಿ ಸಚಿವರು) : ಮಾನ್ಯ ಅಧ್ಯಕ್ಷರೆ,

ಭಾರತ ಸಂವಿಧಾನದ 213(2)(ಎ) ಅನುಚ್ಛೇದದ ಮೇರೆಗೆ;

1. 1966ನೇ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ (ನಿಬಂಧನೆ) ಅಧಿನಿಯಮ (1966ನೇ ಕರ್ನಾಟಕ ಅಧಿನಿಯಮ 27) ದಲ್ಲಿ ಪ್ರಕರಣ 10, 44 ಮತ್ತು 63ರಲ್ಲಿ ತಿದ್ದುಪಡಿ ಮಾಡಿ ದಿನಾಂಕ 08-01-2001ರಂದು ಹೊರಡಿಸಲಾದ ಸಂವ್ಯಶಾಇ:61:ಶಾಸನ:2000ನೇ ಕ್ರಮಾಂಕದ ಆದೇಶ ಸಂಖ್ಯೆ: 1.

**1956ರ ಕಂಪನಿ ಕಾಯ್ದೆಯ 619 (ಎ) ಪ್ರಕರಣದ ಮೇರೆಗೆ;**

2. ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣಾ ಹಾಗೂ ರಫ್ತು ನಿಗಮ ನಿಯಮಿತದ 1999-2000ನೇ ಸಾಲಿನ ವಾರ್ಷಿಕ ವರದಿ;

3. ದಿ ಮೈಸೂರು ಟೊಬ್ಯಾಕೊ ಕಂಪನಿ ಲಿಮಿಟೆಡ್‌ನ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ;

4. ಕರ್ನಾಟಕ ಸ್ಟೇಟ್ ಆಗ್ರೋ ಕಾರ್ನ್ ಪ್ರಾಡಕ್ಟ್ಸ್ ಲಿಮಿಟೆಡ್ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ;

5. ಕರ್ನಾಟಕ ಆಗ್ರೋ ಇಂಡಸ್ಟ್ರೀಸ್ ಕಾರ್ಪೊರೇಷನ್ ಲಿಮಿಟೆಡ್‌ನ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿ ಹಾಗೂ ಅದರೊಂದಿಗೆಯಲ್ಲಿ ಕರ್ನಾಟಕ ಕಾಂಪೋಸ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಲಿಮಿಟೆಡ್ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಡಾ॥ ಜಿ. ಪರಮೇಶ್ವರ (ಉನ್ನತ ಶಿಕ್ಷಣ, ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ,

**1976ರ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಅಧಿನಿಯಮದ 3(9)ನೇ ಪ್ರಕರಣದ ಮೇರೆಗೆ;**

1. ಮೈಸೂರು ವಿಶ್ವವಿದ್ಯಾಲಯದ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಶ್ರೀ ಎ.ಎಂ. ಮಾದು ರವರ ವಯೋ ನಿವೃತ್ತಿ ನಂತರ ಸೇವೆ ಮುಂದುವರಿಸಿದ್ದು ಅದನ್ನು ರದ್ದುಗೊಳಿಸುವ ಸಂಬಂಧದಲ್ಲಿ ದಿನಾಂಕ :6-9-2000ದಂದು ಹೊರಡಿಸಲಾದ ಇಡಿ:56:ಯುಎಂವಿ:2000ನೇ ಸಂಖ್ಯೆಯ ಆದೇಶ;

**1983ರ ಕರ್ನಾಟಕ ಶಿಕ್ಷಣ ಅಧಿನಿಯಮ (1995ರ ಕರ್ನಾಟಕ ಅಧಿನಿಯಮ 1) 145(4)ನೇ ಪ್ರಕರಣದ ಮೇರೆಗೆ;**

2. ಕರ್ನಾಟಕ ಶಿಕ್ಷಣ ಕಾಯಿದೆ ಅಡಿಯಲ್ಲಿ ರಚಿಸಲಾದ ಕರ್ನಾಟಕ ಶಿಕ್ಷಣ ಸಂಸ್ಥೆಗಳ (ಖಾಸಗಿ ಶಿಕ್ಷಣ ಸಂಸ್ಥೆಗಳ ನೌಕರರ ಸೇವಾ ಷರತ್ತು ಮತ್ತು ನಿಬಂಧನೆ) ನಿಯಮ 1999ನ್ನು ರಚಿಸಿ ದಿನಂಕ 02-02-2000ರಂದು ಹೊರಡಿಸಲಾದ ಇಡಿ:52:ವಿವಿಧ:99ನೇ ಸಂಖ್ಯೆಯ ಅಧಿಸೂಚನೆ;

**1997ರ ಕರ್ನಾಟಕ ರಾಜ್ಯ ವಿಶ್ವವಿದ್ಯಾನಿಲಯದ ಅಧಿನಿಯಮ 45(2)ನೇ ಪ್ರಕರಣದ ಮೇರೆಗೆ;**

3. ಕರ್ನಾಟಕ ವಿಶ್ವವಿದ್ಯಾನಿಲಯದ 1999-2000ನೇ ಸಾಲಿನ ವಾರ್ಷಿಕ ವರದಿ;

**1994ರ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ ಅಧಿನಿಯಮ 25(2)ರ ಪ್ರಕರಣದ ಮೇರೆಗೆ**

4. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ (ಬೆಳಗಾವಿ)ದ 1998-99ನೇ ಸಾಲಿನ ವಾರ್ಷಿಕ ವರದಿ;

**1976ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಧಿನಿಯಮ 42(3)ರ ಪ್ರಕರಣದ ಮೇರೆಗೆ;**

5. ಮೈಸೂರು ವಿಶ್ವವಿದ್ಯಾನಿಲಯದ 1998-99ನೇ ಸಾಲಿನ ಲೆಕ್ಕಪರಿಶೋಧನಾ ವರದಿ;

**1992ರ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ ಅಧಿನಿಯಮ 27(4)ರ ಪ್ರಕರಣದ ಮೇರೆಗೆ;**

6. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾಲಯದ 1997-98ನೇ ಸಾಲಿನ ಲೆಕ್ಕಪರಿಶೋಧನಾ ವರದಿಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ

ಶ್ರೀ ಸಿ. ಆರ್. ಸಗೀರ್ ಅಹಮದ್ (ಸಾರಿಗೆ ಸಚಿವರು) :

(ಪ್ರೊ. ಬಿ.ಕೆ. ಚಂದ್ರಶೇಖರ್, ವಾರ್ತಾ ರಾಜ್ಯ ಸಚಿವರ ಪರವಾಗಿ) : ಮಾನ್ಯ ಅಧ್ಯಕ್ಷರೆ,

**1956ರ ಕಂಪನಿ ಕಾಯ್ದೆ 619(ಎ) ಪ್ರಕರಣದ ಮೇರೆಗೆ;**

ಕರ್ನಾಟಕ ಚಲನಚಿತ್ರ ಕೈಗಾರಿಕೆ ಅಭಿವೃದ್ಧಿ ನಿಗಮದ 1999-2000ನೇ ಸಾಲಿನ ವಾರ್ಷಿಕ ವರದಿ ಮತ್ತು ಲೆಕ್ಕ ಪತ್ರಗಳ ವರದಿಯನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಡಿ. ಬಿ. ಇನಾಂದಾರ್ (ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು) : ಮಾನ್ಯ ಅಧ್ಯಕ್ಷರೆ,

**1956ರ ಕಂಪನಿಗಳ ಕಾಯ್ದೆ 619(ರ) ಪ್ರಕರಣದ ಮೇರೆಗೆ;**

ಕರ್ನಾಟಕ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ನಿಯಮಿತದ 1999-2000ನೇ ಸಾಲಿನ ವಾರ್ಷಿಕ ವರದಿಯನ್ನು ಸಭೆಯ ಮುಂದೆ ಮುಂಡಿಸುತ್ತೇನೆ

## 4. ಅಧ್ಯಕ್ಷರ ಅಪ್ಪಣೆ ಮೇರೆಗೆ

ಕೇಂದ್ರ ಸಚಿವರಾದ ಶ್ರೀ ಮನೋಹರಜೋಷಿಯವರು ಬೆಳಗಾವಿ ಮಹಾರಾಷ್ಟ್ರಕ್ಕೆ ಸೇರಬೇಕು ಎಂದು ಪ್ರಚೋದನಾಕಾರಿ ಭಾಷಣ ಮಾಡಿರುವುದರ ಬಗ್ಗೆ